ಮಾಡ್ಬೇಕಾಗಿತ್ತು. ಕೆಂಪೇಗೌಡರು ಏನಾದ್ರೂ ಇದ್ದಿದ್ರೆ ಅವರು ಬೆಂಗಳೂರು ಬಿಟ್ಟು ಹೊರಗೆ ಕಸಾಪ ಸಭೆ ನಡೆಸಲು ಬಿಡ್ತಾ ಇದ್ರಾ ಸಾ! ಅಧಿಕಾರ ವಿಸ್ತರಣೆಗೆ ಹೀಗೆ ನಿರ್ಧಾರ ತೆಗೆದುಕೊಳ್ಳಲು ಇವರಿಗೆ ಅಧಿಕಾರ ಇಲ್ಲ ಸಾರ್.. ಇಂತಹ ನಿರ್ಧಾರಗಳನ್ನು ಒಂದು ಲಕ್ಷ ಕನ್ನಡಿಗರ ಮಹಾಸಮಾವೇಶ ಸೇರಿಸಿ ಮೆಜಾರಿಟಿ ಪಡೆದು ಕೈಗೊಳ್ಳಬೇಕು.. ಇವ್ರದ್ದು ಏನಿದ್ದರೂ ಮೈನಾರಿಟಿ ಸಾ..!'

ಮೈನಾರಿಟಿ ಎಂದಾಕ್ಷಣ ನನ್ನ ಎದೆ ಝಲ್ಲೆಂದಿತು. ಸದ್ಯಕ್ಕೆ ಮೈನಾರಿಟಿ ವಿಷಯದಲ್ಲಿ ಮೂಗು ತೂರಿಸೋದು ಸ್ವಲ್ಪ ಕಷ್ಟದ ಕೆಲಸವೇ. ಪರ ಇದ್ದರೂ ಕಷ್ಟ, ವಿರೋಧ ಇದ್ದರೂ ಕಷ್ಟ. ಜನ ಮೈಮೇಲೇ ಬಂದು ಬಿಡ್ತಾರೆ. ಆದ್ರೂ ಧೈರ್ಯ ವಹಿಸಿ ಕೇಳಿದೆ: ಯಾವ ಮೈನಾರಿಟಿಯಪ್ಪಾ..?

'ಲಿಂಗೈಸ್ಟಿಕ್ ಮೈನಾರಿಟಿ ಸಾ...' ಅಂದ ಯಂಕ್ಟೇಶ.

ಅರೆ..! ಇದ್ಯಾವುದಪ್ಪಾ ಹೊಸ ಗ್ರೂಪು! ಲಿಂಗ್ವಿಸ್ಟಿಕ್ ಮೈನಾರಿಟಿ ಗೊತ್ತು, ರಿಲೀಜಿಯಸ್ ಮೈನಾರಿಟಿ ಗೊತ್ತು. ಇದು ಲಿಂಗೈಸ್ಟಿಕ್ ಮೈನಾರಿಟಿ ಅಂದರೆ..? ಅದನ್ನೇ ಕೇಳಿದೆ. ಯಂಕ್ಟೇಶ ಉಮೇದಿನಿಂದ ಉತ್ತರಿಸತೊಡಗಿದ.

'ಸಾ... ಲಿಂಗಾಯತರದ್ದು ಪ್ರತ್ಯೇಕ ಮೈನಾರಿಟಿ ರಿಲೀಜನ್ನೂ ಎಂದು ರಾಜ್ಯ ಸರ್ಕಾರ ಘೋಷಿಸಿದೆಯಲ್ಲ.. ಅದನ್ನು ವೀರಶೈವರು ವಿರೋಧಿಸುತ್ತಿದ್ದಾರೆ. ಆದರೆ ನಿಜವಾಗಿ ನೋಡಿದರೆ ವೀರಶೈವರೇ ಮೈನಾರಿಟಿ ಸಾ. ಲಿಂಗಾಯತರು ಸಂಖ್ಯೆಯಲ್ಲಿ ಮೆಜಾರಿಟಿ ಇದ್ದಾರೆ. ಇದು ಅನ್ಯಾಯ ಅಲ್ವಾ ಸಾ..?'

ಏನೆಂದು ಉತ್ತರಿಸೋದು? ಬಿಎಸ್‌ವೈ ಅವರೇ ಈ ಗೊಂದಲ ವೈ ಎಂದು ಅರ್ಥ ಮಾಡಿಕೊಳ್ಳಲಾಗದೆ, ಮೌನವಾಗಿದ್ದಾರೆ. ಶಾಮ್ನೂರಪ್ಪ ಒಂದು ದಿನ ಆ ಕಡೆ, ಇನ್ನೊಂದು ದಿನ ಈ ಕಡೆ ಹೇಳಿಕೆ ಕೊಡ್ತಿದಾರೆ. ಸರ್ಕಾರ ನಿಜಕ್ಕೂ ಏನು ತೀರ್ಮಾನ ತಗೊಂಡಿದೆ ಅನ್ನೋದು ಸರ್ಕಾರಕ್ಕೇ ಸರಿಯಾಗಿ ಗೊತ್ತಿದ್ದಂತಿಲ್ಲ. ಅದೂ ಅಲ್ಲದೆ, ಚರ್ಚೆ ವಿಷಯಾಂತರವಾಗುತ್ತಿದೆ.

'ರಿಲೀಜನ್ ವಿಷಯ ಸದ್ಯಕ್ಕೆ ಪಕ್ಕಕ್ಕಿಡೋಣ ಯಂಕ್ಟೇಶ. ಚುನಾವಣೆ ಮುಗಿದ ಮೇಲೆ ಚರ್ಚಿಸೋಣ. ಅಷ್ಟೊತ್ತಿಗೆ ಈ ವಿಷಯದ ಬಗ್ಗೆ ಚರ್ಚಿಸಲು ರಾಜಕಾರಣಿಗಳಿಗೂ ಆಸಕ್ತಿ ಹೊರಟೋಗಿರುತ್ತೆ. ನಾವಿಬ್ಬರೇ ಆರಾಮವಾಗಿ ಚರ್ಚಿಸಬಹುದು. ಸದ್ಯಕ್ಕೆ ಸಾಹಿತಿಗಳ ವಿಷಯ ಮಾತನಾಡೋಣ..' ಅಂದೆ. ಯಂಕ್ಟೇಶ ಒಪ್ಪಿಕೊಂಡ.

'ಸರಿ ಸಾರ್. ಅಂದ ಹಾಗೆ ನೀವು ಹಸಿ ಕಸಾಪ..ನಾ? ಒಣ ಕಸಾಪ..ನಾ?' ಎಂದು ಕೇಳಿದ.

ಇದ್ಯಾವುದಪ್ಪಾ ಇನ್ನೊಂದು ವರ್ಗೀಕರಣ! ನಮ್ಮ ಕಾರ್ಪೊರೇಷನ್‌ನವರು ಅದೇನೋ ಹಸಿ ಕಸ, ಒಣ ಕಸ ಅಂತ ವಿಂಗಡಣೆ ಮಾಡಿದ್ದಾರಲ್ಲ... ಆ ತರಹ ಕೇಳ್ತಿದ್ದೆಯಲ್ಲಾ...! ಅದನ್ನೇ ಕೇಳಿದೆ.

ಯಂಕ್ಟೇಶ ಉತ್ಸಾಹದಿಂದ ವಿವರಿಸತೊಡಗಿದ– 'ಸಾ... ಇತ್ತೀಚೆಗೆ ನಮ್ಮ ಹಿರಿಯ ಜ್ಞಾನಪೀಠ ಸಾಹಿತಿಗಳೊಬ್ಬರು, ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಹೊಸ ಪರಿಭಾಷೆಗಳನ್ನು ಬಳಸಬೇಕು.. ಎಂದು ಕರೆ ನೀಡಿದರು. ಆ ಬಳಿಕ ನಾನೇ ಈ ಹೊಸ ಶಬ್ದಗಳನ್ನು ಕಂಡು ಹಿಡಿದೆ. ಪ್ರತಿ ವರ್ಷವೂ ಒಂದಿಲ್ಲ ಒಂದು ಪ್ರಶಸ್ತಿ ಅಥವಾ ಬಹುಮಾನ ಗಳಿಸೋರು ಹಸೀ ಕಸಾಪ. ಯಾವ ಪ್ರಶಸ್ತೀನೂ ಸಿಗದೆ ಸದಾ ಒಣಗಿರೋರು ಒಣ ಕಸಾಪ..!' ಎಂದ.

'ಹಂಗೆಲ್ಲ ಸಾಹಿತಿಗಳನ್ನು ಅವಮಾನ ಮಾಡಬಾರದು ಯಂಕ್ಟೇಶಾ. ನಿಜವಾದ ಸಾಹಿತಿಗಳು ಪ್ರಶಸ್ತಿಗಾಗಿ ಬರೆಯೋದಿಲ್ಲ. ಅವರ ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕಾಗಿ ಬರೆಯುತ್ತಾರೆ' ಎಂದು ಗಂಭೀರವಾಗಿ ಉತ್ತರಿಸಿದೆ.

'ಮತ್ತೆ ನೀವು ಸಾಹಿತಿಗಳು ಓದುಗರಿಗೆ ಅವಮಾನ ಮಾಡಬಹುದಾ ಸಾ...?' ಯಂಕ್ಟ ರಾಂಗ್ ಆದ.

'ಯಾಕಪ್ಪಾ.. ಏನಾಯ್ತು?'

'ಮೊನ್ನೆ ಒಬ್ಬ ಪ್ರಕಾಶಕರು — ಈ ಲೇಖಕರ ಪುಸ್ತಕ ಖರೀದಿಸಿದರೆ ಒಂದು ಕಪಾಟು ಉಚಿತ– ಅಂತ ಅನೌನ್ಸ್ ಮಾಡಿದ್ದಾರಲ್ಲ... ನಾವೇನು ಕಪಾಟು ಸಲುವಾಗಿ ಪುಸ್ತಕ ಖರೀದಿಸೋರು ಅನ್ಕೊಂಡಿದ್ದೀರಾ? ಹಪ್ಪಟ ಖನ್ನಡ ಅಭಿಮಾನಿಗಳು ಸಾ...'

ಏನು ಮಾತನಾಡಬೇಕೆಂದು ನನಗೆ ತೋಚಲಿಲ್ಲ. ಆ ಪ್ರಕಾಶಕರ ತೊಂದರೆ ಏನೆಂದು ಯಾರಿಗೆ ಗೊತ್ತು? ಅಕಸ್ಮಾತ್ ಅವರದ್ದು ಕಪಾಟು ಅಂಗಡಿಯೂ ಇದ್ದು, ಅಲ್ಲಿ ನೂರಾರು ಕಪಾಟುಗಳು ಮಾರಾಟ ಆಗದೆ ಉಳಿದಿದೆಯೋ ಏನೋ..! ಪುಸ್ತಕಗಳ ಜತೆಗೆ ಅದೂ ಖಾಲಿಯಾಗಲಿ ಎಂದೇನಾದರೂ ಅವರು ಐಡಿಯಾ ಮಾಡಿರಬಹುದೆ..?

ಯಂಕ್ಟ ಸುಮ್ಮನಾಗಲಿಲ್ಲ. 'ಅದು ಹೋಗಲಿ ಬಿಡಿ ಸಾ.. ಈ ಕರ್ನಾಟಕ ಸಾಹಿತ್ಯ ಅಕಾಡೆಮಿಯವರಿಗೆ ಏನಾಗಿದೆ? ಪ್ರಶಸ್ತಿ ಕೊಡೋವಾಗ ಸಾಹಿತ್ಯಕ ಶಬ್ದಗಳನ್ನು ಸರಿಯಾಗಿ ಬಳಸಬೇಡವೆ?' ಎಂದು ಹೊಸ ತಗಾದೆ ಎತ್ತಿದ.

'ಅಕಾಡೆಮಿಗೆ ಏನಾಗಿದೆ? ಅಲ್ಲೆಲ್ಲ ಒಳ್ಳೆಯ ಸಾಹಿತಿಗಳೇ ಇದ್ದಾರಲ್ಲ..' ಎಂದು ಕುತೂಹಲದಿಂದ ಪ್ರಶ್ನಿಸಿದೆ.

'ಅದೇ ಸಾ..! ಅಕಾಡೆಮಿ ವತಿಯಿಂದ ಮೊನ್ನೆ ಸಾಹಿತಿಗಳಿಗೆ ಹತ್ತು ಹೊಸ ಪ್ರಶಸ್ತಿಗಳನ್ನು ನೀಡಿದ್ದಾರಲ್ಲಾ...?'

'ಹೌದು, ಸಾಹಿತ್ಯ ಶ್ರೀ ಅಂತ ಹೊಸ ಪ್ರಶಸ್ತಿ ಕೊಟ್ಟರಲ್ಲ.. ಬಹಳ ಒಳ್ಳೆಯ ಕೆಲಸ..'

'ಆ ಹತ್ತು ಮಂದಿ ಸಾಹಿತಿಗಳಲ್ಲಿ ಇಬ್ಬರು ಹೆಣ್ಣುಮಕ್ಕಳೂ ಇದ್ದರು. ಗಂಡಸರಿಗೇನೋ ಸಾಹಿತ್ಯಶ್ರೀ ಅನ್ನೋದು ಸರಿ. ಆದರೆ ಹೆಣ್ಣುಮಕ್ಕಳಿಗೆ ಸಾಹಿತ್ಯ ಸ್ತ್ರೀ ಅಂತ ಕೊಡಬೇಕಲ್ಲ..? ಅಥವಾ ಸಾಹಿತ್ಯ ಶ್ರೀಮತಿ ಅಂದರೂ ಸರಿ ಆಗುತ್ತಿತ್ತು. ಮಹಿಳೆಯರು ಹೇಗೆ ಶ್ರೀ ಆಗ್ತಾರೆ? ಸಾಹಿತ್ಯಕವಾಗಿ ಇದು ಸರೀನಾ...?' ಯಂಕ್ಟೇಶ ಗೆದ್ದವನಂತೆ ನನ್ನ ಕಡೆಗೆ ನೋಡಿದ.

ಎಷ್ಟೋ ಸಲ ನಮ್ಮ ಯಂಕ್ಟೇಶ ಹೀಗೆ ಸಾಹಿತ್ಯಕವಾಗಿಯೇ ಅಸಾಹಿತ್ಯಕ ಪ್ರಶ್ನೆಗಳನ್ನು ಕೇಳಿ ನನ್ನನ್ನು ತಬ್ಬಿಬ್ಬುಗೊಳಿಸುತ್ತಾನೆ. ಆದರೂ ಅವನಿಗೆ ಕನ್ನಡ ಕಲಿಸಿದ ಪಾಪಕ್ಕೆ ಉತ್ತರಿಸಲೇಬೇಕು.

'ಸುಮ್ನೆ ಪ್ರತಿಯೊಂದಕ್ಕೂ ತಗಾದೆ ತೆಗೀಬೇಡಪ್ಪ.. ಸಾಹಿತಿಗಳಿಗೆ ನಾವು ಗೌರವ ಕೊಡಬೇಕು. ಅವರು ಕನ್ನಡ ನಾಡಿನ ಆಸ್ತಿ ಇದ್ದಂಗೆ..' ಎಂದೆ.

'ಹೌದು ಸಾ.. ಮೊದಲು ಮಾಸ್ತಿ ಒಬ್ಬರೇ ಇದ್ದರು. ಈಗ ಎಲ್ಲರೂ ಆಸ್ತಿಗಳೇ. ಪ್ರಶಸ್ತಿಗಳು ಇನ್ನಷ್ಟು ಹೆಚ್ಚಾಗಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ. ವೃದ್ಧಾಪ್ಯದ ಕಾಲದಲ್ಲಿ ಸಾಹಿತಿಗಳಿಗೆ ಒಂದಿಷ್ಟು ಹಣಕಾಸಿನ ಆಸರೆಯೂ ಆದೀತು. ಕನ್ನಡ ನಾಡಿನಲ್ಲಿ ಸಾಹಿತಿಗಳ ಸಂಖ್ಯೆಯೂ ದೊಡ್ಡದಿದೆ. ನಾಡು ಸುಭಿಕ್ಷವಾಗಬೇಕಾದರೆ ಎಲ್ಲರಿಗೂ ಪ್ರಶಸ್ತಿಗಳು ಸಿಗಬೇಕು. ನನ್ನ ಕೇಳಿದರೆ, ಕನ್ನಡ ನಾಡಿನಲ್ಲಿ ಪ್ರಶಸ್ತಿ ಸಿಗದೇ ಇದ್ದ ಯಾವ ಸಾಹಿತಿಗಳೂ ಬದುಕಿರಬಾರದು..!' ಎಂದು ಸ್ವಲ್ಪ ಆವೇಶದಿಂದಲೇ ಹೇಳಿದ ಯಂಕ್ಟೇಶ. ಹಾಗೆಯೇ ತನ್ನದೊಂದು ಕೊನೆಯ ಕವಿತೆಯನ್ನೂ ಒಗೆದ:

ಎಲ್ಲಾದರೂ ಇರು ಎಂತಾದರು ಇರು  
ಎಂದೆಂದಿಗು ನೀ ಪ್ರಶಸ್ತಿ ಪಡೆಯುತಿರು  
ನೀನೇರುವ ಮಲೆ ಅದೇ ವಿಧಾನಸೌಧ  
ನೀ ಕುಡಿಯುವ ನೀರ್ ಅದೇ ಬಿಸ್ಲೇರಿ  
ಕನ್ನಡವೇ ಸತ್ಯ.. ಕನ್ನಡವೇ ಭತ್ಯ  
ಕಸಾಪ ಒಂದಿದ್ದರೆ ನೀನೆಮ್ಮಗೆ ಕಲ್ಪತರು..!

